SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

ವಿಜಯವಾಣಿ

Online Newspaper Clipping Service
Dtd- Thursday, 16th, May- 2019



# ರೋಗಿಗಳ ಜೀವಕ್ಕೆ ಕುತ್ತಾಗುವ ಆನ್‌ಲೈನ್ ಕನ್ಸಲ್ಟೆನ್ಸಿ!

■ ಅಭಯ್ ಮನಗೂಳಿ ಬೆಂಗಳೂರು

ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗುವ ಬದಲು ಆನ್‌ಲೈನ್ ವೈದ್ಯಕೀಯ ಸೇವೆ ಮೊರೆ ಹೋಗುತ್ತಿರುವಿರಾ? ಹಾಗಿದ್ದರೆ ಎಚ್ಚರ. ಸಮಯ ಹಾಗೂ ಹಣ ಉಳಿಸುವ ನಿಮ್ಮ ದೂರಾಲೋಚನೆ ನಿಮ್ಮ ಜೀವಕ್ಕೇ ಮುಳುವಾಗಬಹುದು!

ಆನ್‌ಲೈನ್ ಸಮಾಲೋಚನೆಯಿಂದ ಅನುಕೂಲಕ್ಕಿಂತ ರೋಗಿಯ ಜೀವಕ್ಕೆ ಆಪತ್ತೇ ಹೆಚ್ಚೆಂದು ಕರ್ನಾಟಕ ಮೆಡಿಕಲ್ ಕೌನ್ಸಿಲ್ (ಕೆಎಂಸಿ) ಎಚ್ಚರಿಕೆ ಕೊಟ್ಟಿದೆ. ಭಾರತೀಯ ವೈದ್ಯಕೀಯ ಮಂಡಳಿ(ಎಂಸಿಐ) ಮಾನದಂಡಗಳಿಗೆ ಒಳಪಟ್ಟು ಆನ್‌ಲೈನ್ ಮೂಲಕ ಸೇವೆ ಒದಗಿಸಲು ಅವಕಾಶವಿದೆಯೇ ಎಂದು ಬೆಂಗಳೂರು ಚರ್ಮವೈದ್ಯರ ಸಂಘ (ಬಿಡಿಎಸ್) ಕೇಳಿದ ಮಾಹಿತಿಗೆ ಪ್ರತಿಕ್ರಿಯಿಸಿರುವ ಕೆಎಂಸಿ ಅದರಿಂದ ಉಂಟಾಗುವ ಅಪಾಯಗಳ ಸಮಗ್ರ ಮಾಹಿತಿಯನ್ನು ಬಿಚ್ಚಿಟ್ಟಿದೆ.

ರೋಗಿಯನ್ನು ದೈಹಿಕವಾಗಿ ಪರಾಮರ್ಶಿಸದ ಹೊರತು ಆತನ ರೋಗಗಳನ್ನು ಪತ್ತೆ ಮಾಡಲು ಸಾಧ್ಯವಿಲ್ಲ. ಆನ್‌ಲೈನ್ ಮೂಲಕ ರೋಗವನ್ನು ತಪ್ಪಾಗಿ ಗ್ರಹಿಸಿದರೆ ಅಪಾಯದ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆನ್‌ಲೈನ್ ವೈದ್ಯಕೀಯ ಚಿಕಿತ್ಸೆ ಸೂಕ್ತವಲ್ಲ ಎಂಬುದು ಕೆಎಂಸಿ ನಿಲುವು.

ಪುಟ 3



ಆನ್‌ಲೈನ್ ವೈದ್ಯಕೀಯ ಸೇವೆಯನ್ನು ವಿರೋಧಿಸುತ್ತೇವೆ. ಆರೋಗ್ಯಕ್ಕಾಗಿ ವೈದ್ಯರನ್ನು ಭೇಟಿ ಮಾಡುವುದಕ್ಕೂ ಸಮಯ ಇಲ್ಲ ಎಂದು ಹೇಳುವುದು ತಪ್ಪು. ರೋಗಿಯನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿ ಚಿಕಿತ್ಸೆ ನೀಡಿದರೂ ವೈದ್ಯರ ಮೇಲೆ ಆರೋಪಗಳು ಬರುವುದಿದೆ. ಇನ್ನು, ಕಣ್ಣಿಗೆ ಕಾಣದ ವೈದ್ಯರನ್ನು ನಂಬುವುದು ಹೇಗೆ?

| ಡಾ. ಎಚ್.ಎನ್. ರವೀಂದ್ರ, ಅಧ್ಯಕ್ಷರು ಭಾರತೀಯ ವೈದ್ಯಕೀಯ ಸಂಘ(ಕರ್ನಾಟಕ)

## ಅಪಾಯಗಳೇನು?

- ಕಣ್ಣಿಗೆ ಕಾಣದೆ ವೈದ್ಯಕೀಯ ಸಲಹೆ ನೀಡುವವರು ನಕಲಿ ವೈದ್ಯರೂ ಆಗಿರಬಹುದು.
- ಹಣದಾಸೆಗಾಗಿ ಯಾವುದೋ ರೋಗಕ್ಕೆ ಮತ್ಯಾವುದೋ ಸಲಹೆ ಕೊಡಬಹುದು.
- ಜನರಲ್ಲಿ ಆತಂಕ ಸೃಷ್ಟಿಸಿ ಆನ್‌ಲೈನ್‌ನಲ್ಲಿ 2ನೇ ಸಲಹೆ ಪಡೆಯಲು ಸೂಚಿಸಬಹುದು.
- ಸಣ್ಣಪುಟ್ಟ ಸಮಸ್ಯೆಯನ್ನೂ ದೊಡ್ಡ ರೋಗವೆಂದು ತಪ್ಪಾಗಿ ಅರ್ಥೈಸಿಕೊಳ್ಳುವ ಸಾಧ್ಯತೆ
- ಒಂದು ವೇಳೆ ಅನಾಹುತವಾದರೆ ಯಾರನ್ನೂ ಹೊಣೆ ಮಾಡಲು ಅವಕಾಶವಿರುವುದಿಲ್ಲ.

## ಗೂಗಲ್ ಮಾಹಿತಿ ಬೇಡ

ಯಾವುದೇ ರೋಗಕ್ಕೆ ಗೂಗಲ್ ಮೂಲಕ ಮಾಹಿತಿ ಪಡೆಯುವುದು ಅಪಾಯಕರ. ಕೆಲವು ವೆಬ್‌ಸೈಟ್‌ಗಳು, ಫೇಕ್ ಐಡಿಗಳಿಂದ ಸುಳ್ಳು ಮಾಹಿತಿ ಹರಿಬಿಡಲಾಗುತ್ತಿದ್ದು, ಸಣ್ಣಪುಟ್ಟ ಲಕ್ಷಣಗಳಿಗೂ ಅಪಾಯಕಾರಿ ರೋಗ ಎಂಬಂತೆ ಬಿಂಬಿಸಲಾಗಿರುತ್ತದೆ. ಕೆಲವು ವೆಬ್‌ಸೈಟ್‌ಗಳು ಹಿಟ್ ಪಡೆಯಲು ಇಂಥ ಮಾರ್ಗ ಹಿಡಿದರೆ ಇನ್ನೂ ಕೆಲವೆಡೆ ಅರ್ಧಂಬರ್ಧ ಮಾಹಿತಿ ನೀಡಲಾಗಿರುತ್ತದೆ. ಇಂತಹ ಮಾಹಿತಿಯಿಂದಲೇ ಹಲವರ ಬದುಕು ಹಾಳಾಗಿದೆ. ಲೈಂಗಿಕ ಸಮಸ್ಯೆಗಳಿಗೆ ಹೆಚ್ಚಾಗಿ ಗೂಗಲ್ ಮಾಡುವುದು ಒಂದೆಡೆಯಾದರೆ, ಗರ್ಭಿಣಿಯರು ತಮ್ಮಲ್ಲಿ ಕಂಡುಬರುವ ಬದಲಾವಣೆಗಳ ಬಗ್ಗೆ ಗೂಗಲ್‌ನಲ್ಲಿ ಮಾಹಿತಿ ಪಡೆದು ಆತಂಕಕ್ಕೊಳಗಾಗುವ ಪ್ರಕರಣಗಳು ಹೆಚ್ಚುತ್ತಿವೆ.